# ವೈರಿ ಸ್ನೇಹಿತನಾದಾಗ!



ಚಿತ್ರ: ಮಂಜುನಾಥ ಹುಲಕೊಪ್ಪದ

■ ಪ್ರಕಾಶ ಎಸ್. ಮನ್ನಂಗಿ

ಮಧ್ಯಾಹ್ನದ ಬಿರು ಬಿಸಿಲು. ಅಮೆರಿಕದ ಅಧ್ಯಕ್ಷರಾಗಿದ್ದ ಜಾರ್ಜ್ ವಾಷಿಂಗ್ಟನ್ ಅರಾಮಾಗಿ ಕುಳಿತಿದ್ದರು. ಅವರನ್ನು ಭೇಟಿಯಾಗಲು ಬಂದಿದ್ದ ಒಬ್ಬರ ಹೆಸರನ್ನು ಚೀಟಿಯಲ್ಲಿ ಬರೆದುಕೊಟ್ಟಿದ್ದರು, ಅದನ್ನು ಅವರ ಜವಾನ ತಂದು ಕೈಗಿತ್ತ. ಚೀಟಿಯನ್ನೋದಿದ ವಾಷಿಂಗ್ಟನ್ ಖುಷಿಯಿಂದ ಹೊರಗೋಡಿ ಬಂದರು. ಬಂದಿದ್ದವನು ಅವರ ಶಾಲಾ ಸಹಪಾಠಿ ಪೀಟರ್ ಮಿಲ್ಲರ್. ಎಪ್ಪತ್ತು ಕಿಲೋ ಮೀಟರ್ ನಡೆದು ದೂರದ ಹಳ್ಳಿಯಿಂದ ಬಂದಿದ್ದ ಆತನ ಪಾದರಕ್ಷೆ, ಕಾಲುಗಳು ಧೂಳಿನಿಂದ ಮುಳುಗಿದ್ದವು. ಅದಾವುದೂ ವಾಷಿಂಗ್ಟನ್‌ರ ಕಣ್ಣಿಗೆ ಬೀಳಲಿಲ್ಲ. ಸ್ನೇಹಿತನನ್ನು ಬಾಚಿ ತಬ್ಬಿಕೊಂಡರು. ಕೈ ಹಿಡಿದು ಒಳಗೆ ಕರೆದೊಯ್ದರು.

ಗೆಳೆಯನ ಕೈ ಕಾಲು ತೊಳೆಸಿ, ತಿನ್ನಲು ಹಣ್ಣು ಹಂಪಲು ನೀಡಿ ಉಪಚರಿಸಿದರು. ಹಳೆಯ ಸ್ನೇಹಿತನ ಮತ್ತು ಅವರ ಮನೆಯವರ ಆರೋಗ್ಯ ಕುರಿತು ವಿಚಾರಿಸಿದರು. ಮೈಕೆಲ್ ವಿಟ್ಮನ್ ಕುರಿತು ಮಾತಾಡಲು ಪೀಟರ್ ಮಿಲ್ಲರ್‌ರಿಗೆ ದಾರಿ ಕಾಣದಾಯಿತು. ಹೇಗೆ ವಿಷಯ ಅರುಹುವುದೆಂದು ಯೋಚಿಸತೊಡಗಿದರು. ಪೀಟರ್ ಮಿಲ್ಲರ್‌ರ ಊರಿನವನೇ ವಿಟ್ಮನ್.

ಹಾಗೆ ನೋಡಿದರೆ ವಿಟ್ಮನ್ ಮಿಲ್ಲರ್‌ರ ಬದ್ಧ ವೈರಿ. ಎಲ್ಲೆಂದರಲ್ಲಿ ಅವರನ್ನು ಹೀಯಾಳಿಸುವುದು, ಅವಮಾನ ಮಾಡುವುದನ್ನು ಮಾಡುತ್ತಿದ್ದ. ಅವನಿಗೆ ಕ್ಷಮಾದಾನ ನೀಡುವಂತೆ ಅಧ್ಯಕ್ಷರಲ್ಲಿ ಕೋರಲು ಈಗ ಬಂದಿದ್ದರು.

ವಿಟ್ಮನ್‌ನ ದೇಶದ್ರೋಹದ ಪ್ರಕರಣವೊಂದು ಅಧ್ಯಕ್ಷರ ಮುಂದೆ ಬಂದಿತ್ತು. ಅದು ಗುರುತರವಾದ ಆಪಾದನೆಯಾದ್ದರಿಂದ ಅವನಿಗೆ ಮರಣದಂಡನೆ ಶಿಕ್ಷೆ ವಿಧಿಸಲಾಗಿತ್ತು. ದಿನಾಂಕವನ್ನು ನಿಗದಿ ಮಾಡುವುದು ಬಾಕಿ ಇದ್ದುದರಿಂದ ಕಾರಾಗೃಹಕ್ಕೆ ತಳ್ಳಲಾಗಿತ್ತು. ವಿಟ್ಮನ್‌ನ ಪ್ರಾಣವನ್ನು ಉಳಿಸುವಂತೆ ಮಿಲ್ಲರ್ ಬೇಡಿಕೊಂಡರು. ಆಗ ಅಧ್ಯಕ್ಷರು ನಿನ್ನ ಸ್ನೇಹಿತನ ಮೇಲೆ ದೇಶದ್ರೋಹದ ಆಪಾದನೆಯಿರುವುದರಿಂದ ಉಳಿಸುವುದು ಕಷ್ಟ ಎಂದು ಬಿಟ್ಟರು. ಇಲ್ಲ. ತಪ್ಪು ತಿಳಿದಿದ್ದೀರಿ ಆತ ನನ್ನ ಸ್ನೇಹಿತನಲ್ಲ, ಬದ್ಧ ವೈರಿ. ಎಲ್ಲೆಂದರಲ್ಲಿ ನನ್ನನ್ನು ಹೀಯಾಳಿಸುವುದು, ಅವಮಾನ ಮಾಡುವುದನ್ನು ಮಾಡುತ್ತಿದ್ದ. ಆದರೂ ಅವನಿಗೆ ಕ್ಷಮಾದಾನ ನೀಡುವಂತೆ ಕೋರಲು ಬಂದಿದ್ದೇನೆ ಎಂದರು.

ಏನಾಶ್ಚರ್ಯ ಸ್ನೇಹಿತರಿಗೇ ಕೇಡುಕನ್ನುಂಟು ಮಾಡುವವರಿರುವಾಗ ವೈರಿಗೆ ಕ್ಷಮಾದಾನ ನೀಡುವಂತೆ ಕೋರಲು ಬಂದಿರುವುದು ನಂಬಲಸಾಧ್ಯ ಎಂದರು ಅಧ್ಯಕ್ಷರು. ಆಗಲಿ ನೀನು ಸ್ನೇಹಿತನಿಗೆ ಕ್ಷಮಾದಾನ ನೀಡುವಂತೆ ಕೋರಲು ಬಂದಿದ್ದರೆ ತಪ್ಪಾಗುತ್ತಿತ್ತು. ಆದರೆ ವೈರಿಗೆ ಕ್ಷಮಾದಾನ ನೀಡುವಂತೆ ಬೇಡುತ್ತಿದ್ದಿಯಾ. ಸರಿ ಆತನನ್ನು ದೇಶದ್ರೋಹದ ಆಪಾದನೆಯಿದ್ದರೂ, ಅನಿವಾರ್ಯವಾಗಿ ನಿಮ್ಮ ಸ್ವಾರ್ಥವಿಲ್ಲದ್ದರಿಂದ ಬಿಡುಗಡೆ ಮಾಡಲು ಆಜ್ಞಾಪಿಸುತ್ತೇನೆ ಎಂದರು.

ವಿಟ್ಮನ್ನನನ್ನು ಬಿಡುಗಡೆ ಮಾಡಿ ಮಿಲ್ಲರ್‌ಗೆ ಒಪ್ಪಿಸಲಾಯಿತು. ಅವರಿಬ್ಬರೂ ಹೊರಡುವಾಗ ಅಧ್ಯಕ್ಷರು ನೀವು ವೈರಿಗೆ ಕೇಡು ಬಯಸದೇ ಅವನ ಬಿಡುಗಡೆಯನ್ನು ಬಯಸಿದ್ದು ಈಗಲೂ ಆಶ್ಚರ್ಯವಾಗುತ್ತಿದೆ ಎಂದರು.

ಹೌದು. ಕ್ಷಮೆ ಕೂಡ ವಿರೋಧಿಗಳನ್ನು ನಾಶ ಮಾಡುತ್ತದೆ. ಇಂದಿನಿಂದ ವಿಟ್ಮನ್ ನನ್ನ ಸ್ನೇಹಿತ. ಒಬ್ಬ ವಿರೋಧಿ ಕಡಿಮೆಯಾದರು ಎಂದು ಸಂತಸ ವ್ಯಕ್ತಪಡಿಸಿದ ಮಿಲ್ಲರ್.

ಇಬ್ಬರೂ ಕೈ ಕೈ ಹಿಡಿದು ಊರಿಗೆ ಮರಳಿದರು. ಅನಂತರ ಸ್ನೇಹಿತರಂತೆ ಕೂಡಿ ಬಾಳಿದರು. ■